SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar
UNIVERSITY LIBRARY & LEARNING RESOURCE CENTRE

Online Newspaper Clipping Service
Dtd-Monday, 7th, August 2023



ಕನ್ನಡಪ್ರಭ
ನೇರ, ದಿಟ್ಟ, ನಿರಂತರ

# ಖಾಸಗಿ ಕೋಟಾ ವೈದ್ಯ ಶುಲ್ಕ 10% ದುಬಾರಿ

## ಮೆಡಿಕಲ್ ಸೀಟಿಗೆ ಈಗ ₹10.80 ಲಕ್ಷ, ಡೆಂಟಲ್‌ಗೆ ₹7.32 ಲಕ್ಷ ಶುಲ್ಕ | ಸರ್ಕಾರಿ ಕೋಟಾ ಸೀಟು ಶುಲ್ಕದಲ್ಲಿ ಬದಲಾವಣೆ ಇಲ್ಲ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದ ಅಲ್ಪಸಂಖ್ಯಾತ, ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತ ವೈದ್ಯಕೀಯ- ದಂತ ವೈದ್ಯಕೀಯ ಕಾಲೇಜುಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಲ್ಲಿನ ಖಾಸಗಿ ಕೋಟಾದ ಸೀಟುಗಳ ಶುಲ್ಕವನ್ನು ಶೇ.10ರಷ್ಟು ಹೆಚ್ಚಳ ಮಾಡಲು ಅನುಮತಿಸಿ ಸರ್ಕಾರ ಆದೇಶಿಸಿದೆ.



ಆದರೆ, ಸರ್ಕಾರಿ ಕಾಲೇಜುಗಳು ಹಾಗೂ ಖಾಸಗಿ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳ ಯಾವುದೇ ಶುಲ್ಕ ಹೆಚ್ಚಳ ಮಾಡಿಲ್ಲ.

ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸುಗಳ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ ಸಂಬಂಧ ಪ್ರತೀ ವರ್ಷದಂತೆ ಈ ವರ್ಷವೂ ಆಗಿರುವ ಒಪ್ಪಂದದ ಪ್ರಕಾರ 2023-24ನೇ ಸಾಲಿನ ಶುಲ್ಕ ನಿಗದಿ ಕುರಿತು ಇತ್ತೀಚೆಗೆ ಆದೇಶ ಮಾಡಲಾಗಿದೆ. ಆ ಪ್ರಕಾರ, ಕರ್ನಾಟಕ ವೃತ್ತಿಪರ ಕಾಲೇಜುಗಳ ಪ್ರತಿಷ್ಠಾನದ (ಕೆಪಿಸಿಎಫ್) ಸದಸ್ಯ ಕಾಲೇಜುಗಳಲ್ಲಿನ ಖಾಸಗಿ ಕೋಟಾದ ಸೀಟುಗಳ ಶುಲ್ಕದಲ್ಲಿ ಮಾತ್ರ ಶೇ. 10 ಏರಿಕೆ ಮಾಡಲಾಗಿದೆ. ಇದರಿಂದ ಕಳೆದ ಸಾಲಿನಲ್ಲಿ 9,81,956 ರು. ಇದ್ದ ಖಾಸಗಿ ಕೋಟಾದ ವೈದ್ಯಕೀಯ ಸೀಟುಗಳ ಶುಲ್ಕ ಈಗ 10,80,152 ರು.ಗೆ ಏರಿಕೆಯಾಗಿದೆ. ಅದೇ ರೀತಿ 6,66,023 ರು. ಇದ್ದ ಖಾಸಗಿಕೋಟಾದದಂತವೈದ್ಯಕೀಯಕೋರ್ಸುಗಳ ಶುಲ್ಕ ಈಗ 7,32,625 ರು.ಗೆ ಏರಿಕೆಯಾಗಿದೆ.

ಹಿಂದಿನ ವರ್ಷ ಖಾಸಗಿ ಕೋಟಾ ಸೀಟುಗಳ ಶುಲ್ಕವನ್ನು ಏರಿಕೆ ಮಾಡದ ಹಿನ್ನೆಲೆಯಲ್ಲಿ ಈ ವರ್ಷ ಶೇ.20ರಷ್ಟು ಶುಲ್ಕ ಹೆಚ್ಚಳಕ್ಕೆ ಕಾಲೇಜುಗಳು ಬೇಡಿಕೆ ಇಟ್ಟಿದ್ದವು. ಆದರೆ, ಸರ್ಕಾರ ಶೇ.10ರಷ್ಟು ಶುಲ್ಕ ಹೆಚ್ಚಳಕ್ಕೆ ಒಪ್ಪಿಗೆ ನೀಡಿತ್ತು. ಆದರಂತೆ ಆದೇಶ ಮಾಡಲಾಗಿದೆ ಎಂದು ತಿಳಿದು ಬಂದಿದೆ.

**ಸರ್ಕಾರಿ ಕೋಟಾ ಸೀಟುಗಳ ಶುಲ್ಕ ಏರಿಕೆ ಇಲ್ಲ:** ಉಳಿದಂತೆ, ಸರ್ಕಾರಿ ಕಾಲೇಜುಗಳಲ್ಲಿನ ಸೀಟುಗಳು ಹಾಗೂ ಇನ್ನುಳಿದ ಎಲ್ಲಾ ಮಾದರಿ ಖಾಸಗಿ ವೈದ್ಯಕೀಯ ಕಾಲೇಜುಗಳು ಮತ್ತು ಖಾಸಗಿ ವಿಶ್ವವಿದ್ಯಾಲಯಗಳಲ್ಲಿನ ಸರ್ಕಾರಿ ಕೋಟಾದ ವೈದ್ಯಕೀಯ, ದಂತ ವೈದ್ಯಕೀಯ ಸೀಟುಗಳ ಶುಲ್ಕದಲ್ಲಿ ಯಥಾಸ್ಥಿತಿ ಕಾಪಾಡಲಾಗಿದೆ.

ಹಾಗಾಗಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಎಂಬಿಬಿಎಸ್ ಸೀಟುಗಳಿಗೆ ಕಳೆದ ಸಾಲಿನಂತೆ 50 ಸಾವಿರ ರು. ಮತ್ತು ದಂತ ವೈದ್ಯಕೀಯ ಸೀಟುಗಳಿಗೆ 40 ಸಾವಿರ ರು. ಇರಲಿದೆ.

ಅದೇ ರೀತಿ, ಇತರೆ ಖಾಸಗಿ ಕಾಲೇಜುಗಳು ಮತ್ತು ಖಾಸಗಿ ವಿವಿಗಳಲ್ಲಿನ ಸರ್ಕಾರಿ ಕೋಟಾದ ವೈದ್ಯ ಸೀಟುಗಳಿಗೆ 1,28,746 ರು. ಮತ್ತು ದಂತ ವೈದ್ಯ ಸೀಟುಗಳ ಶುಲ್ಕ 83,358 ರು. ಯಥಾಸ್ಥಿತಿಯಲ್ಲಿ ಮುಂದುವರೆಯಲಿದೆ.

### ಖಾಸಗಿ ವಿವಿಗಳ ವೈದ್ಯ ಸೀಟು ಶುಲ್ಕ ಎಷ್ಟು?

ಇನ್ನು ರಾಜ್ಯ ಸರ್ಕಾರದೊಂದಿಗೆ ಯಾವುದೇ ಒಡಂಬಡಿಕೆಗೆ ಒಳಪಡದ ವಿವಿಧ ಖಾಸಗಿ ವಿಶ್ವವಿದ್ಯಾಲಯಗಳ ಖಾಸಗಿ ಕೋಟಾ, ಎನ್‌ಆರ್‌ಐ ಮತ್ತು ಇತರೆ ಕೋಟಾ ಸೀಟುಗಳ ಶುಲ್ಕವನ್ನೂ ಆಯಾ ವಿವಿಗಳು ನಿಗದಿಪಡಿಸಿ ನೀಡಿರುವಂತೆ ಸರ್ಕಾರ ಪ್ರಕಟಿಸಿದೆ.

ಅದರಂತೆ ಬೆಂಗಳೂರಿನ ಸೇಂಟ್ ಜಾನ್ಸ್ ವಿವಿಯ ಖಾಸಗಿ ಕೋಟಾ ಸೀಟುಗಳ ಶುಲ್ಕ 7.76 ಲಕ್ಷ ರು., ನಾಗಮಂಗಲದ ಆದಿಚುಂಚನಗಿರಿ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ (ಎಐಎಂಎಸ್)ನ ಖಾಸಗಿ ಕೋಟಾ ಸೀಟುಗಳ ಶುಲ್ಕ 20 ಲಕ್ಷ ರು., ಎನ್‌ಆರ್‌ಐ ಹಾಗೂ ಇತರೆ ಕೋಟಾ ಸೀಟಿಗೆ 36 ಲಕ್ಷ ರು., ಧಾರವಾಡದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜ್ ಆಫ್ ಮೆಡಿಕಲ್‌ನಲ್ಲಿ(ಎಸ್‌ಡಿಎಂ) ಖಾಸಗಿ ಕೋಟಾ ಸೀಟಿಗೆ 20 ಲಕ್ಷ ರು., ಎನ್‌ಆರ್‌ಐ ಹಾಗೂ ಇತರೆ ಕೋಟಾಗೆ 30 ಲಕ್ಷ ರು., ಕಲಬುರಗಿಯ ಖಾಜಾ ಬಂದನವಾಜ್ ವಿಶ್ವವಿದ್ಯಾಲಯದಲ್ಲಿ ಖಾಸಗಿ ಕೋಟಾ ಸೀಟಿಗೆ 16.14 ಲಕ್ಷ ರು., ಎನ್‌ಆರ್‌ಐ ಮತ್ತು ಇತರೆ ಕೋಟಾ ಸೀಟಿಗೆ 32 ಲಕ್ಷ ರು., ಬೆಂಗಳೂರಿನ ಡಾ.ಚಂದ್ರಮ್ಮ ದಯಾನಂದಸಾಗರ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಎಜುಕೇಷನ್ ಅಂಡ್ ರಿಸರ್ಚ್‌ನಲ್ಲಿ (ಸಿಡಿಎಸ್‌ಎನ್‌ಇಆರ್) ಖಾಸಗಿ ಕೋಟಾ ಸೀಟಿಗೆ 20 ಲಕ್ಷ ರು., ಎನ್‌ಆರ್‌ಐ ಹಾಗೂ ಇತರೆ ಕೋಟಾ ಸೀಟಿಗೆ 40 ಲಕ್ಷ ರು. ಶುಲ್ಕ ನಗದಿಪಡಿಸಲಾಗಿದೆ. ಉಳಿದಂತೆ ಈ ವಿವಿಗಳಲ್ಲಿನ ಸರ್ಕಾರಿ ಕೋಟಾ ಸೀಟುಗಳ ಶುಲ್ಕ ಇತರೆ ಖಾಸಗಿ ವಿವಿಗಳಂತೆ 1,28,746 ರು. ಇರಲಿದೆ ಎಂದು ತಿಳಿಸಿದೆ.

ವಿಜಯ ಕರ್ನಾಟಕ



twitter.co

### ಯುಜಿಸಿ ಆರೋಪದ ಹಿನ್ನೆಲೆಯಲ್ಲಿ 25 ಖಾಸಗಿ ವಿವಿಗಳಿಂದ ವರದಿ ಕೇಳಿದ ಸರಕಾರ

# ಖಾಸಗಿ ವಿವಿ ಕುಲಪತಿಗಳ ನೇಮಕ ಪ್ರಶ್ನಿಸಿದ ಸರಕಾರ

■ **ದೇವರಾಜ್ ಕನಕಪುರ** ಬೆಂಗಳೂರು
devaraj.l@timesgroup.com

ರಾಜ್ಯದಲ್ಲಿರುವ ಖಾಸಗಿ ವಿಶ್ವವಿದ್ಯಾಲಯಗಳು ಕುಲಪತಿಗಳ ನೇಮಕಾತಿಯಲ್ಲಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ (ಯುಜಿಸಿ) ನಿಯಮ ಪಾಲಿಸದಿರುವ ಅನುಮಾನ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಕುಲಪತಿ ನೇಮಕ ವಿಚಾರದಲ್ಲಿ ಯುಜಿಸಿ ನಿಯಮಗಳನ್ನು ಅನುಸರಿಸಿರುವ ಬಗ್ಗೆ ಎಲ್ಲ ಖಾಸಗಿ ವಿವಿಗಳಿಂದ ವರದಿ ಕೇಳಿದೆ.

ಇತ್ತೀಚಿಗೆ ಯುಜಿಸಿಯು, ಕುಲಪತಿಗಳ ನೇಮಕಕ್ಕೆ ಸಂಬಂಧಿಸಿದಂತೆ ರಾಜ್ಯ ಸರಕಾರಕ್ಕೆ ಪತ್ರ ಬರೆದಿದೆ. ಹೀಗಾಗಿ, ಉನ್ನತ ಶಿಕ್ಷಣ ಇಲಾಖೆಯು ರಾಜ್ಯದಲ್ಲಿರುವ 25 ಖಾಸಗಿ ವಿಶ್ವವಿದ್ಯಾಲಯಗಳಿಗೆ ಪತ್ರ ಬರೆದು ನೇಮಕಾತಿಯನ್ನು ಪ್ರಶ್ನಿಸಿದೆ. ಕೆಲ ವಿಶ್ವವಿದ್ಯಾಲಯಗಳಲ್ಲಿ ಅನರ್ಹ ವ್ಯಕ್ತಿಗಳನ್ನು ಕುಲಪತಿ ಹುದ್ದೆಗೆ ನೇಮಕ ಮಾಡಿರುವ ಬಗ್ಗೆ ಯುಜಿಸಿ ಅನುಮಾನ ವ್ಯಕ್ತಪಡಿಸಿದೆ.

**ಯುಜಿಸಿಯ ಪತ್ರ ಸಾರ**

- ಕುಲಪತಿ ಹುದ್ದೆಗೆ ಅನರ್ಹರ ನೇಮಕದ ಅನುಮಾನ
- ನೇಮಕಕ್ಕೆ ಸಂಬಂಧಿಸಿ ಶೋಧನಾ ಸರಕಾರ ರಚಿಸಿರಬೇಕು

**ಸರಕಾರ ನಡೆ**

- ವರದಿ ನೀಡುವಂತೆ ಖಾಸಗಿ ವಿಶ್ವವಿದ್ಯಾಲಯಗಳಿಗೆ ಸೂಚನೆ
- ನೇಮಕ ನಿಯಮ ಮೀರಿದ್ದರೆ ತಕ್ಷಣ ಕುಲಪತಿಗಳ ವಜಾ ಎಚ್ಚರಿಕೆ



ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಕುಲಪತಿಗಳನ್ನು ನೇಮಕ ಮಾಡಿಕೊಳ್ಳುವ ವಿಚಾರದಲ್ಲಿ ಯುಜಿಸಿ ನಿಗದಿಪಡಿಸಿರುವ ಮಾನದಂಡಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಕುಟುಂಬಸ್ಥರಿಗೆ ಹಾಗೂ ಅನರ್ಹರನ್ನು ನೇಮಕ ಮಾಡುವುದು ಕೂಡ ತಪ್ಪು.

**- ಪ್ರೊ. ಎಂ.ಆರ್.ದೊರೆಸ್ವಾಮಿ,**
ನಿಕಟಪೂರ್ವ ಶಿಕ್ಷಣ ಸುಧಾರಣೆಗಳ ಸಲಹೆಗಾರ

ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು 2018ರಲ್ಲಿ ಪ್ರಾಧ್ಯಾಪಕರು ಹಾಗೂ ಸಿಬ್ಬಂದಿ ನೇಮಕಕ್ಕೆ ಪ್ರತ್ಯೇಕ ಮಾರ್ಗಸೂಚಿಗಳನ್ನು ಹೊರಡಿಸಿದೆ. ಅದರಂತೆ ಖಾಸಗಿ ವಿಶ್ವವಿದ್ಯಾಲಯಗಳ ಕುಲಪತಿ ನೇಮಕಕ್ಕೂ ಪ್ರತ್ಯೇಕ ಮಾರ್ಗಸೂಚಿ ಹೊರಡಿಸಲಾಗಿದೆ. ಒಂದೊಮ್ಮೆ ಯುಜಿಸಿ ನಿಯಮವನ್ನು ಪಾಲಿಸದಿದ್ದರೆ ಅಂಥವರನ್ನು ತಕ್ಷಣವೇ ವಜಾಗೊಳಿಸಬೇಕೆಂದು ಉನ್ನತ ಶಿಕ್ಷಣ ಇಲಾಖೆಯು ಎಚ್ಚರಿಕೆ ನೀಡಿದೆ. ಅಲ್ಲದೆ, ಕುಲಪತಿಗಳ ನೇಮಕಾತಿಯಲ್ಲಿ ಅನುಸರಿಸಿರುವ ಮಾರ್ಗಸೂಚಿಗಳು ಹಾಗೂ ದೃಢೀಕೃತ ಪ್ರಮಾಣ ಪತ್ರಗಳನ್ನು ವರದಿಯೊಂದಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

**ಯುಜಿಸಿ ನಿಯಮದಲ್ಲೇನಿದೆ?**

ಯುಜಿಸಿ ನಿಯಮದ ಪ್ರಕಾರ ಕುಲಪತಿಗಳನ್ನು ನೇಮಕ ಮಾಡುವ ಅಧಿಕಾರವನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಕ್ಷರಿಗೆ ನೀಡಲಾಗಿದೆ. ಆದರೆ, ಕುಲಪತಿ ಸ್ಥಾನಕ್ಕೆ ಸೂಚಿಸಲ್ಪಟ್ಟ ಹೆಸರಿಗೆ ಕಾರ್ಯಕಾರಿ ಪರಿಷತ್ ಅನುಮೋದಿಸಬೇಕು. ಆಯ್ಕೆಗೆ ಪ್ರತ್ಯೇಕ ಶೋಧನಾ ಸಮಿತಿ ರಚಿಸಬೇಕು. ಈ ಸಮಿತಿಯಲ್ಲಿ ಕನಿಷ್ಠ 3 ರಿಂದ 5 ಮಂದಿ ಇರಬೇಕು. ಹುದ್ದೆ ಭರ್ತಿಗೆ ಪತ್ರಿಕೆಗಳಲ್ಲಿ ಜಾಹಿರಾತು ಪ್ರಕಟಿಸಬೇಕು. 10 ವರ್ಷ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿದ ಅನುಭವ ಹೊಂದಿರಬೇಕು. ಉನ್ನತ ಮಟ್ಟದ ಸಾಮರ್ಥ್ಯ, ಸಮಗ್ರತೆಯ ಶೈಕ್ಷಣಿಕ ನಾಯಕತ್ವ ಪ್ರದರ್ಶಿಸಿದ ಪುರಾವೆಯೊಂದಿಗೆ ನೈತಿಕ ಮೌಲ್ಯ, ಸಾಂಸ್ಥಿಕ ಬದ್ಧತೆಯನ್ನು ಹೊಂದಿರಬೇಕು. ರಾಜಕೀಯ ಹಿತಾಸಕ್ತಿ ಮತ್ತು ಕ್ರಿಮಿನಲ್ ಪ್ರಕರಣಗಳಿರಬಾರದು. ಕುಟುಂಬ ಸದಸ್ಯರನ್ನು ನೇಮಕ ಮಾಡುವುದು ಸೂಕ್ತವಲ್ಲವೆಂದು ಸೂಚಿಸಿದೆ.

**ರಕ್ತ ಸಂಬಧಿಕರೇ ಹೆಚ್ಚು**

ಖಾಸಗಿ ವಿವಿ ನಿರ್ಮಾಣ ಮಾಡಿದವರೇ ಅಧ್ಯಕ್ಷರಾಗಿ ಅಥವಾ ಕುಲಾಧಿಪತಿಯಾಗಿರಲಿದ್ದು, ಸಹ ಕುಲಪತಿ ಹುದ್ದೆಯನ್ನು ನೇರವಾಗಿ ಅವರಿಗೆ ಇಷ್ಟ ಬಂದವರಿಗೆ ನೀಡಬಹುದು. ಆದರೆ, ಕುಲಪತಿ ಹುದ್ದೆ ನೇಮಕವನ್ನು ಆ ರೀತಿ ಮಾಡುವಂತಿಲ್ಲ. ಆದರೂ, ಶೈಕ್ಷಣಿಕ ಅರ್ಹತೆ ಇಲ್ಲದಿದ್ದರೂ ಕೆಲವರು ತಮ್ಮ ಕುಟುಂಬ ಸದಸ್ಯರಿಗೆ ಕುಲಪತಿ ಸ್ಥಾನ ನೀಡುತ್ತಾರೆ. ಕುಲಪತಿ ಸ್ಥಾನ ಉನ್ನತ ಹುದ್ದೆಯಾಗಿರುವುದರಿಂದ ಹೊರಗಿನ ಪ್ರಾಧ್ಯಾಪಕರನ್ನು ನೇಮಕ ಮಾಡುತ್ತಿಲ್ಲ ಎಂದು ಖಾಸಗಿ ವಿವಿಯ ಉನ್ನತಾಧಿಕಾರಿಯೊಬ್ಬರು ತಿಳಿಸಿದರು.